RNU AIR DHARWAD

# MARCH 27, 2025
# AKASHAVANI - DHARWAD
# PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ರಾಷ್ಟ್ರೀಯ ಗ್ರಾಹಕ ಸಹಾಯವಾಣಿ 1–9–1–5, ಗ್ರಾಹಕರ ರಕ್ಷಣೆಗೆ ಮೀಸಲಿದೆ – ಪ್ರಲ್ಹಾದ ಜೋಶಿ.
- ಧಾರವಾಡದ, ಸೆಂಟರ್ ಫಾರ್ ಮಲ್ಟಿ ಡಿಸಿಪ್ಲಿನರಿ ಡೆವಲಪ್‌ಮೆಂಟ್ ರಿಸರ್ಚ್ ವತಿಯಿಂದ, ಇಂದು ಮತ್ತು ನಾಳೆ, ರಾಷ್ಟ್ರೀಯ ವಿಚಾರ ಗೋಷ್ಠಿ.
- ಮಡಿಕೇರಿಯಲ್ಲಿ, ನಾಳೆಯಿಂದ ಒಂದು ತಿಂಗಳು, 25ನೇ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ.
- ಇಂದು ವಿಶ್ವ ರಂಗಭೂಮಿ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಆಹಾರ ಕಲಬೆರಕೆ ದೂರುಗಳ ವಿರುದ್ಧ, ಕೇಂದ್ರ ಸರ್ಕಾರ ಕಠಿಣ ಹಾಗೂ ತ್ವರಿತ ಕ್ರಮ ಕೈಗೊಳ್ಳುತ್ತಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವ ಪ್ರಲ್ಹಾದ ಜೋಶಿ, ಲೋಕಸಭೆಗೆ, ತಿಳಿಸಿದ್ದಾರೆ. ಸಂಸದ ನವೀನ್ ಜಿಂದಾಲ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಆಹಾರ ಗುಣಮಟ್ಟ ತಪಾಸಣೆಗಾಗಿ, ಭಾರತೀಯ ಆಹಾರ ಸುರಕ್ಷತೆ ಹಾಗೂ ಮಾನದಂಡಗಳ ಪ್ರಾಧಿಕಾರ, ದೇಶಾದ್ಯಂತ 242 ಪ್ರಯೋಗಾಲಯಗಳು, ನಾಲ್ಕು ರೆಫರಲ್ ಪ್ರಾಯೋಗಾಲಯಗಳು ಹಾಗೂ ಮೊಬೈಲ್ ಪರೀಕ್ಷಾ ಪ್ರಾಯೋಗಾಲಯಗಳನ್ನು ಹೊಂದಿದೆ, ಎಂದು ಮಾಹಿತಿ ನೀಡಿದರು. ರಾಷ್ಟ್ರೀಯ ಗ್ರಾಹಕ ಸಹಾಯವಾಣಿ 1–9–1–5, ಗ್ರಾಹಕರ ರಕ್ಷಣೆಗೆ ಮೀಸಲಿದೆ ಎಂದರು.

<><><>

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲೂಕು, ತಮ್ಮಡಹಳ್ಳಿ ಸೇರಿದಂತೆ, 10 ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದು, ಅಲ್ಲಿನ ಸಮಸ್ಯೆಗಳಿಗೆ ಪರಿಹಾರ ಸೂಚಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು, ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಅಧ್ಯಕ್ಷ, ಎಂ.ಗೋವಿಂದರಾವ್ ತಿಳಿಸಿದ್ದಾರೆ.

ತಮ್ಮ ತಂಡದೊಂದಿಗೆ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ, ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ರಾಜ್ಯದ ಹಿಂದುಳಿದ ಪ್ರದೇಶಗಳಿಗೆ ಭೇಟಿ ಮಾಡಿ, ಅಲ್ಲಿರುವ ಸಮಸ್ಯೆಗಳನ್ನು ಗುರುತಿಸಿ, ಅಸಮತೋಲನ ನಿವಾರಿಸಿ, ಅಭಿವೃದ್ಧಿ ಸಾಧಿಸುವ ಕುರಿತು, ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ಹೇಳಿದರು.

<><><>

ದಕ್ಷಿಣಕನ್ನಡ ಜಿಲ್ಲೆ, ಬಂಟ್ವಾಳ ತಾಲೂಕಿನ, ಸಜೀಪಮೂಡ ನಿವಾಸಿ, ಪದ್ಯಾಣ ಲಕ್ಷ್ಮೀನಾರಾಯಣ ಭಟ್ ಅವರು, 10 ಎಕರೆ ಜಮೀನಿನಲ್ಲಿ, ಸಮಗ್ರ ಕೃಷಿ ಕೈಗೊಂಡು, ಮಿಶ್ರ ಬೆಳೆಯಲ್ಲಿ ರಾಜ್ಯದ ಗಮನ ಸೆಳೆದಿದ್ದಾರೆ. ದಕ್ಷಿಣಕನ್ನಡದಲ್ಲಿ ಕೋಳಿ ಹಿಕ್ಕೆ, ಸಕ್ಕರೆ ಕಾರ್ಖಾನೆಯ ಪ್ರೆಸ್‌ಮಡ್, ತೆಂಗಿನಕಾಯಿ ಸಿಪ್ಪೆಯನ್ನು ಗೊಬ್ಬರವಾಗಿ ಹಾಗೂ ಕಾಫಿ ಸಿಪ್ಪೆಯನ್ನೂ ಗೊಬ್ಬರವಾಗಿಸಬಹುದು ಎಂದು, ಪರಿಚಯಿಸಿದ ಪ್ರಯೋಗಶೀಲ ಕೃಷಿಕರು. ತೀರ್ಥಹಳ್ಳಿಯ ಪುರುಷೋತ್ತಮ ರಾಯರಿಂದ ಪ್ರಭಾವಿತರಾಗಿ, ವೆನಿಲ್ಲಾ ಸಹ ದಾಖಲೆಯ ಪ್ರಮಾಣದಲ್ಲಿ ಬೆಳೆದವರು. ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನುಭವ ಹಂಚಿಕೊಂಡಿದ್ದಾರೆ, ಪದ್ಯಾಣ ಲಕ್ಷ್ಮೀನಾರಾಯಣ ಭಟ್.

<><><>

ಪದ್ಯಾಣ ಲಕ್ಷ್ಮೀನಾರಾಯಣ ಭಟ್ ಧ್ವನಿ 60 ಸೆಕೆಂದುಗಳು

<><><>

ಧಾರವಾಡದ ಸೆಂಟರ್ ಫಾರ್ ಮಲ್ಟಿ ಡಿಸಿಪ್ಲಿನರಿ ಡೆವಲಪ್‌ಮೆಂಟ್ ರಿಸರ್ಚ್ –ಸಿ.ಎಮ್.ಡಿ.ಆರ್. ಇಂದು ಮತ್ತು ನಾಳೆ, ರಾಯಾಪುರದ ಹೊಟೇಲ್ ಓಷಿಯನ್ ಪರ್ಲ್‌ನಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಿದೆ. "ಟ್ರಾನ್ಸ್‌ಫಾರ್ಮೇಶನ್ ಆಫ್ ಭಾರತ; ಎ ಸ್ಟೋರಿ ಆಫ್ ಎ ಡಿಕೇಡ್, ಆಂಡ್ ಫ್ಯೂಚರ್ ಔಟ್ಲುಕ್" ವಿ 'ಯದ, ವಿಚಾರ ಸಂಕಿರಣವನ್ನು, ರಾಜ್ಯ ಹಣಕಾಸು ಇಲಾಖೆ ಕಾರ್ಯದರ್ಶಿ ಡಾಕ್ಟರ್ ವಿಶಾಲ, ಇಂದು ಬೆಳಗ್ಗೆ 10 ಗಂಟೆಗೆ ಉದ್ಘಾಟಿಸಲಿದ್ದಾರೆ. ಹೊಸ ದಿಲ್ಲಿಯ, ಇಂಡಿಯನ್ ಕೌನ್ಸಿಲ್ ಆಫ್ ಸೋಷಿಯಲ್ ಸೈನ್ಸ್ ರಿಸರ್ಚ್ ಸದಸ್ಯ ಕಾರ್ಯದರ್ಶಿ, ಪ್ರೊಫೆಸರ್ ಧನಂಜಯ್ ಸಿಂಗ್, ಸಿ.ಎಂ.ಡಿ.ಆರ್. ಕಾರ್ಯಾಧ್ಯಕ್ಷ ಪ್ರೊಫೆಸರ್ ಕೈಲಾಸ್ ಚಂದ್ರ ಶರ್ಮಾ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು, ಸಿ.ಎಂ.ಡಿ.ಆರ್. ನಿರ್ದೇಶಕ ಬಸವಪ್ರಭು ಜಿರ್ಲಿ ತಿಳಿಸಿದ್ದಾರೆ. ದೇಶದ ಹಲವು ರಾಜ್ಯಗಳಿಂದ ಸಮಾಜೋ–ಆರ್ಥಿಕ ವಿಜ್ಞಾನಿಗಳು, ಪಾಲ್ಗೊಳ್ಳಲಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಇಂದು ವಿಶ್ವ ರಂಗಭೂಮಿ ದಿನಾಚರಣೆ. ಅಂತಾರಾಷ್ಟ್ರೀಯ ರಂಗಭೂಮಿ ಸಂಸ್ಥೆ ಸಹಯೋಗದಲ್ಲಿ, ರಂಗಭೂಮಿಯ ಮಹತ್ವ ಸಾರಲು, ಈ ದಿನ ಮೀಸಲು.

<><><>

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ನಾಡೋಜ ಏಣಗಿ ಬಾಳಪ್ಪ ಸ್ಮರಣಾರ್ಥ, ದತ್ತಿ ಅಂಗವಾಗಿ, ಇಂದು ಸಂಜೆ 6 ಗಂಟೆಗೆ, ಶ್ರೀ ರಾ.ಹ. ದೇಶಪಾಂಡೆ ಸಭಾಭವನದಲ್ಲಿ, 'ವಿಶ್ವ ರಂಗಭೂಮಿ ದಿನಾಚರಣೆ' ಹಿನ್ನೆಲೆ, ರಂಗ ಗೌರವ ಸಮಾರಂಭ ಆಯೋಜಿಸಿದೆ. ಗದಗ ಜಿಲ್ಲೆ, ಲಕ್ಷ್ಮೇಶ್ವರದ ಸ್ತ್ರೀ ಸಂಗೀತ ನಾಟಕ ಮಂಡಳಿಯ, ಶಾರದಮ್ಮ ಹೊಂಬಳ, ಗದಗ ಹಾಗೂ ಚಿತ್ತರಗಿಯ ಶ್ರೀ ಕುಮಾರ ವಿಜಯ ನಾಟ್ಯ ಸಂಘದ ವಿಜಯಲಕ್ಷ್ಮಿ ಹಿರೇಮಠ, ಬಾಗಲಕೋಟ ಅವರಿಗೆ, ಧಾರವಾಡ ರಂಗಾಯಣ ಅಧ್ಯಕ್ಷ ರಾಜು ತಾಳಿಕೋಟಿ ರಂಗ ಗೌರವ ಪ್ರದಾನಿಸಿ, ಗೌರವಿಸಲಿದ್ದಾರೆ.

<><><>

ಶಿವಮೊಗ್ಗ ರಂಗಾಯಣ, ಸುವರ್ಣ ಸಂಸ್ಕೃತಿ ಭವನದಲ್ಲಿ, 'ಚಿಣ್ಣರ ಸಿಹಿಮೊಗೆ' ಎಂಬ ರಂಗ ತರಬೇತಿ ಶಿಬಿರ ಆಯೋಜಿಸಿದ್ದು, ಏಪ್ರಿಲ್ ಒಂದರಿಂದ ಆಸಕ್ತರು, ಶುಲ್ಕ ಸಮೇತ ಅರ್ಜಿ ಸಲ್ಲಿಸಬಹುದು.

<><><>

ಮಡಿಕೇರಿಯಲ್ಲಿ ನಾಳೆಯಿಂದ 1 ತಿಂಗಳ ಕಾಲ, 25ನೇ ವರ್ಷದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಗಳು ನಡೆಯಲಿವೆ. ಈ ಬಾರಿಯ ಹಾಕಿ ಪಂದ್ಯಾವಳಿ ಆಯೋಜಕರಾದ, ಮುದ್ದಂಡ ಕುಟುಂಬದ, ರಶಿನ್ ಸುಬ್ಬಯ್ಯ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಮೈದಾನದಲ್ಲಿ ಈ ವಿಷಯ ತಿಳಿಸಿದರು. 390 ಕೊಡವರ ಕುಟುಂಬಗಳು, ಹಾಕಿ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುತ್ತಿವೆ. ಏಪ್ರಿಲ್ 27 ರ ವರೆಗೆ ಮಡಿಕೇರಿಯ 3 ಮೈದಾನಗಳಲ್ಲಿ, ಪಂದ್ಯಗಳು ನಡೆಯಲಿವೆ. ಈ ಬಾರಿಯ, 30 ಮಹಿಳಾ ಹಾಕಿ ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸುತ್ತಿರುವುದು ವಿಶೇಷ, ಎಂದರು. 25 ಸಾವಿರ ಜನ, ಏಕ ಕಾಲಕ್ಕೆ ಪಂದ್ಯಾವಳಿ ವೀಕ್ಷಿಸಲು, ಗ್ಯಾಲರಿ ನಿರ್ಮಾಣಗೊಂಡಿದೆ. 3 ಸಾವಿರ ವಾಹನಗಳಿಗೆ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಪ್ರೇಕ್ಷಕರಿಗೆ 30 ಆಹಾರ ಮಳಿಗೆಗಳನ್ನು ತೆರೆಯಲಾಗುತ್ತದೆ ಎಂದು ರಶಿನ್ ಸುಬ್ಬಯ್ಯ ಮಾಹಿತಿ ನೀಡಿದರು.

<><><>

ಹಕ್ಕಿ ಜ್ವರ ಉಪಶಮನವಾದ ಬೆನ್ನಲ್ಲೇ, ರಾಯಚೂರು ಜಿಲ್ಲೆಯಲ್ಲಿ, ಕಳೆದ 20 ದಿನಗಳ ಅವಧಿಯಲ್ಲಿ, 68 ಬೆಕ್ಕುಗಳಲ್ಲಿ, ಫೆಲೈನ್ ಪ್ಯಾನ್ಲ್ಯುಕೋಪೆನಿಯಾ ವೈರಸ್–ಎಫ್.ಪಿ.ವಿ. ಕಾಣಿಸಿಕೊಂಡಿದ್ದು, 38 ಬೆಕ್ಕುಗಳು ಮೃತಪಟ್ಟಿವೆ. ರಾಯಚೂರು ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆಯ, ಪಾಲಿಕ್ಲಿನಿಕ್ ಉಪ ನಿರ್ದೇಶಕ ಡಾಕ್ಟರ್ ಎಸ್.ಎಸ್.ಪಾಟೀಲ, ಎಫ್.ಪಿ.ವಿ. ನಿಯಂತ್ರಣ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಎಸ್.ಎಸ್.ಪಾಟೀಲ ಧ್ವನಿ 60 ಸೆಕೆಂದುಗಳು

<><><>

ಜಿಲ್ಲಾ ಪಂಚಾಯಿತಿ ಅಭ್ಯರ್ಥಿಗಳ ಮೀಸಲಾತಿ ಪಟ್ಟಿಯನ್ನು, ಬರುವ ಮೇ 31ರೊಳಗೆ ರಾಜ್ಯ ಸರ್ಕಾರ ಪ್ರಕಟಿಸುವ ಸಾಧ್ಯತೆ ಇದೆ; ನಂತರ ಚುನಾವಣೆಗೆ ಸಿದ್ಧತೆ ಆರಂಭವಾಗಲಿದೆ ಎಂದು, ರಾಜ್ಯ ಮುಖ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿ ತಿಳಿಸಿದ್ದಾರೆ. ಬೆಳಗಾವಿಯಲ್ಲಿ ಮಾತನಾಡಿದ ಅವರು, ವಿದ್ಯುನ್ಮಾನ ಮತಯಂತ್ರ ಅಥವಾ ಬ್ಯಾಲೆಟ್ ಪೇಪರ್ ಬಳಸಿ ಚುನಾವಣೆ ಎಂಬ ಬಗ್ಗೆ, ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

<><><>

ಭಾರತ ಚುನಾವಣಾ ಆಯೋಗ, ಏಪ್ರಿಲ್ 1 ರಂದು, ಮತದಾರರ ಪಟ್ಟಿಯಲ್ಲಿ ಹೆಸರು ನೊಂದಣಿ ಹಾಗೂ ತಿದ್ದುಪಡಿಗೆ ಅವಕಾಶ ಕಲ್ಪಿಸಿದೆ, ಎಂದು ಹೇಳಿದರು.

<><><>

ಆಕಾಶವಾಣಿಯ ಬಹುಶ್ರುತ ಕಾರ್ಯಕ್ರಮ, 'ಮನ್ ಕಿ ಬಾತ್' ಮೂಲಕ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇದೇ 30, ಬರುವ ಭಾನುವಾರದಂದು, ಬೆಳಗ್ಗೆ 11 ಗಂಟೆಗೆ, ದೇಶದ ಜನತೆಯನ್ನುದ್ದೇಶಿಸಿ, ಮಾತನಾಡಲಿದ್ದಾರೆ. ಇದು ಮನದ ಮಾತಿನ 120ನೇ ಸಂಚಿಕೆಯಾಗಿದೆ. ಸಾರ್ವಜನಿಕರು ತಮ್ಮ ಅನಿಸಿಕೆ ಹಾಗೂ ಅಭಿಪ್ರಾಯಗಳನ್ನು, "ಮೈ ಜಿ.ಒ.ವಿ. ಓಪನ್ ಫೋರ್ಂ", "ನಮೋ ಆ್ಯಪ್" ಅಥವಾ ಉಚಿತ ಸಹಾಯವಾಣಿ ಸಂಖ್ಯೆ 1800–11–7800 ಮೂಲಕ ಹಂಚಿಕೊಳ್ಳಬಹುದು.

<><><>

ಏಪ್ರಿಲ್ 5 ರಂದು ಬಾಬು ಜಗಜೀವನ್ ರಾಂ ಜಯಂತಿ ಹಾಗೂ ಏಪ್ರಿಲ್ 14ರಂದು, ಬಿ.ಆರ್ ಅಂಬೇಡ್ಕರ್ ಅವರ ಜಯಂತಿ ಆಚರಣೆ ಹಿನ್ನೆಲೆ, ಹಲವೆಡೆ ಪೂರ್ವಭಾವಿ ಸಿದ್ಧತಾ ಸಭೆಗಳು ನಡೆದ ವರದಿಗಳು ಬಂದಿವೆ.

<><><>

ಭಾರತ ಸ್ವಾತಂತ್ರ ಸೇನಾನಿ, ದಿವಂಗತ ಲಕ್ಷ್ಮೀ ಮೆನನ್ ಅವರ ಜನ್ಮ ದಿನವನ್ನು ಇಂದು ಆಚರಿಸಲಾಗುತ್ತಿದೆ.

<><><>

ಶಿವಮೊಗ್ಗದ, ತ್ಯಾವರೆಕೊಪ್ಪ ಹುಲಿ, ಸಿಂಹಧಾಮ, ಯುಗಾದಿ ಹಾಗೂ ರಂಜಾನ್ ಹಬ್ಬದ ಹಿನ್ನೆಲೆ, ಏಪ್ರಿಲ್ 1, ಮಂಗಳವಾರದಂದು, ಮೃಗಾಲಯದ ವೀಕ್ಷಣೆಗೆ ಅವಕಾಶ ಕಲ್ಪಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಷ್ಟ್ರೀಯ ಗ್ರಾಹಕ ಸಹಾಯವಾಣಿ 1–9–1–5, ಗ್ರಾಹಕರ ರಕ್ಷಣೆಗೆ ಮೀಸಲಿದೆ – ಪ್ರಲ್ಹಾದ ಜೋಶಿ.
- ಧಾರವಾಡದ, ಸೆಂಟರ್ ಫಾರ್ ಮಲ್ಟಿ ಡಿಸಿಪ್ಲಿನರಿ ಡೆವಲಪ್‌ಮೆಂಟ್ ರಿಸರ್ಚ್ ವತಿಯಿಂದ, ಇಂದು ಮತ್ತು ನಾಳೆ, ರಾಷ್ಟ್ರೀಯ ವಿಚಾರ ಗೋಷ್ಠಿ.
- ಮಡಿಕೇರಿಯಲ್ಲಿ, ನಾಳೆಯಿಂದ ಒಂದು ತಿಂಗಳು, 25ನೇ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ.
- ಇಂದು ವಿಶ್ವ ರಂಗಭೂಮಿ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>